653. ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಸಾರಾಯಿ ನಿಷೇಧದಿಂದ ಕಳ್ಳಭಟ್ಟಿ ತಯಾರಿಕೆ ಹಾಗೂ ಅದರ ವ್ಯಾಪಾರ ವ್ಯವಹಾರ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ರಾಜ್ಯದ ಯಾವ ಯಾವ ಪ್ರದೇಶದಲ್ಲಿ ಇಂತಹ ಅವ್ಯವಹಾರ ನಡೆಯುತ್ತಿದೆ;

(ಇ) ಇಂತಹ ಕಳ್ಳಭಟ್ಟಿ ತಯಾರಕರ ಮೇಲೆ ಕಳೆದ 3 ತಿಂಗಳಲ್ಲಿ ನಡೆಸಲಾದ ದಾಳಿಗಳೆಷ್ಟು ಹಾಗೂ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

(ಅ) ರಾಜ್ಯದಲ್ಲಿ ಸಾರಾಯಿ ನಿಷೇಧದಿಂದಲೇ ಕಳ್ಳಭಟ್ಟಿ ತಯಾರಿಕೆ ಹಾಗೂ ಅದರ ವ್ಯಾಪಾರ ವ್ಯವಹಾರ ಹೆಚ್ಚಾಗಿದೆ ಎಂದು ಹೇಳಲಾಗದು. ಆದರೆ, ಸಾರಾಯಿ ನಿಷೇಧದ ನಂತರ ನಡೆಸಿದ ಕಾರ್ಯಾಚರಣೆಗಳಲ್ಲಿ ಈ ಕೆಳಕಂಡ ಪ್ರಮಾಣದಲ್ಲಿ ಮದ್ಯಗಳನ್ನು, ವಾಹನಗಳನ್ನು ಮತ್ತು ಅಪರಾಧಿಗಳನ್ನು ವಶಪಡಿಸಿಕೊಂಡು ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

		ಅಬಕಾರಿ ಇಲಾಖೆ	ಪೊಲೀಸ್ ಇಲಾಖೆ
1	ಸಾರಾಯಿ	3.17.436 ಲೀ	1,74,548ಲೀ
2	ಭಾರತೀಯ ತಯಾರಿಕಾ ಮದ್ಯ	2486 ಲೀ.	–
3	ಮದ್ಯಸಾರ	279ಲೀ	–
4	ವಶಪಡಿಸಿಕೊಂಡ ಕಳ್ಳಬಟ್ಟಿ (ಐ.ಡಿ)	6230 ಲೀ	–
5	ನಾಶಪಡಿಸಿದ ಕೊಳೆ	87,709 ಲೀ	–
6	ಜಪ್ತಿ ಪಡಿಸಿದ ಸೇಂದಿ	1130 ಲೀ.	–
7	ಜಪ್ತು ಮಾಡಲಾಗಿರುವ ವಾಹನಗಳ ಸಂಖ್ಯೆ	22	–
8	ದಸ್ತಗಿರಿ ಮಾಡಲಾಗಿರುವ ಆರೋಪಿಗಳ ಸಂಖ್ಯೆ	159	220
9	ದಾಖಲಿಸಿದ ಮೊಕದ್ದಮೆಗಳು	504	225

(ಆ) ಕಳೆದ ಮೂರು ತಿಂಗಳಿಂದ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಈ ಬಗ್ಗೆ ನಡೆದ ಚಟುವಟಿಕೆಗಳ ವಿವರಗಳನ್ನು ಅನುಬಂಧ 'ಅ'ದಲ್ಲಿ ಒದಗಿಸಿದೆ.

(ಇ) ಕಳೆದ ಮೂರು ತಿಂಗಳಲ್ಲಿ 13,422 ದಾಳಿಗಳನ್ನು ನಡೆಸಿದ್ದು, 39,810 ಲೀ. ಕಳ್ಳಬಟ್ಟಿ ಜಪ್ತಿ ಪಡಿಸಿ 13,52,142 ಲೀ. ಕೊಳೆಯನ್ನು ನಾಶಪಡಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ದಲ್ಲಿ ಒದಗಿಸಿದೆ. ದಿನಾಂಕ: 01–07–2007 ರಿಂದ 12–07–2007 ರವರೆಗೆ 3, 17, 436 ಲೀ. ಸಾರಾಯಿ ವಶಪಡಿಸಿಕೊಂಡು 504 ಮೊಕದ್ದಮೆ ದಾಖಲಿಸಿದ್ದು 159 ಆರೋಪಿಗಳನ್ನು ದಸ್ತಗಿರಿಗೊಳಿಸಲಾಗಿದೆ.

ಅನುಬಂಧ–ಅ

ಕ್ರ.ಸ. ಜಿಲ್ಲೆ	ದಾಳಿ ಸಂಖ್ಯೆ	ವಶಪಡಿಸಿಕೊಂಡ ಕಳ್ಳಭಟ್ಟಿ	ನಾಶಪಡಿಸಿದ ಕೊಳೆ
1. ಬೆಂಗಳೂರು(ನ)	1129	12434	684630
2.ಬೆಂಗಳೂರು (ಗ್ರಾ)	324	1799	63117
3.ಬೆಳಗಾಂ	730	7953	72423
4.ಬಳ್ಳಾರಿ	354	40	1635
5.ಬಾಗಲಕೋಟೆ	451	6542	72091
6.ಬಿಜಾಪುರ	427	1678	40347
7.ಬೀದರ್	311	124	9650
8.ಚಿತ್ರದುರ್ಗ	185	02	8730
9.ಚಿಕ್ಕಮಗಳೂರು	2003	1082	41155
10. ದಾವಣಗೆರೆ	210	25	5040
11. ಧಾರವಾಡ	321	142	5630
12. ದಕ್ಷಿಣ ಕನ್ನಡ	769	332	42517
13. ಗದಗ	140	239	7411
14. ಗುಲ್ಬರ್ಗಾ	352	39	24565
15. ಹಾಸನ	493	197	32365
16. ಹಾವೇರಿ	256	928	3005

17. ಕೋಲಾರ	650	245	16016
18. ಕೊಪ್ಪಳ	138	--	260
19. ಕೊಡಗು	212	72	10875
20. ಮಂಡ್ಯ	450	--	3650
21. ಮೈಸೂರು/ ಚಾಮರಾಜನಗರ	427	320	630
22. ರಾಯಚೂರು	418	12	6095
23. ಶಿವಮೊಗ್ಗ	388	38	45365
24. ತುಮಕೂರು	291	02	18916
25. ಉಡುಪಿ	192	143	5183
26. ಉತ್ತರ ಕನ್ನಡ	1901	5424	130808
ಒಟ್ಟು	**13422**	**39810**	**1352142**

652. ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಉಪ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ರಾಜ್ಯದಲ್ಲಿ ಸಾರಾಯಿ ನಿಷೇಧದಿಂದ ನಿರುದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಹಾಗಿದ್ದಲ್ಲಿ, ಈವರಗೆ ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಕಲ್ಪಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

(ಅ) ರಾಜ್ಯದಲ್ಲಿ ಸಾರಾಯಿ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದವರ ಸಂಖ್ಯೆ 42,637 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಆ) ರಾಜ್ಯ ಸರ್ಕಾರವು ಜಾರಿಗೆ ತಂದಿರುವ "ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ"ಯ ಕಾರ್ಯವಿಧಾನದಂತೆ ಸಾರಾಯಿ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದವರಿಗೆ ನೆರವು ನೀಡುವ ಬಗ್ಗೆ ಜಿಲ್ಲೆಯ ಕೈಗಾರಿಕಾ ಮತ್ತು ವಾಣಿಜ್ಯ